# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ವಿದ್ಯಾರಣ್ಯ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ-೫೮೩ ೨೭೬**

---

**ಡಾ. ಡಿ. ಪಾಂಡುರಂಗ ಬಾಬು** ದಿನಾಂಕ: ೧೬.೧೨.೨೦೧೬

**ಕುಲಸಚಿವರು**

ಸಂಖ್ಯೆ:ಕವಿಹಂ:ಕುಸ:ಮಾ.ಕೇಂ/ಪಿ.ಎಚ್.ಡಿ/೨೦೧೬-೧೭

**ಮಾನ್ಯರೆ,**

**ವಿಷಯ: ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳ ೨೦೧೬-೧೭ನೇ ಸಾಲಿನ ಪಿಎಚ್.ಡಿ. ವಿದ್ಯಾರ್ಥಿಗಳ ಅಧ್ಯಯನದ ಶುಲ್ಕ ಪಾವತಿ ಹಾಗೂ ನೋಂದಣಿ ಕುರಿತು.**

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳಲ್ಲಿ ೨೦೧೬-೧೭ನೇ ಸಾಲಿನಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಶುಲ್ಕವನ್ನೇ ಪಾವತಿಸಿಕೊಳ್ಳತಕ್ಕದ್ದು. ಇದನ್ನು ಹೊರತುಪಡಿಸಿ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ಪಡೆಯುವುದು ಕಂಡುಬಂದಲ್ಲಿ ತಮ್ಮ ಮಾನ್ಯತಾ ಕೇಂದ್ರದ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

ಅಧ್ಯಯನಾಂಗವು ಪ್ರಕಟಿಸಿದ ಪಿಎಚ್.ಡಿ. ಫಲಿತಾಂಶ ಪಟ್ಟಿಯಲ್ಲಿರುವ ಮೆರಿಟ್ ಮತ್ತು ಮೀಸಲಾತಿಯನ್ವಯ ವಿದ್ಯಾರ್ಥಿಗಳ ನೋಂದಣಿಯನ್ನು ಮಾಡಿಕೊಳ್ಳತಕ್ಕದ್ದು.

/-

**ಕುಲಸಚಿವರು**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ**

**ಇವರಿಗೆ,**

೦೧. ಸಂಯೋಜನಾಧಿಕಾರಿಗಳು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ ಕಾಲೇಜು, ಉಡುಪಿ-೫೭೬ ೧೦೨
೦೨. ಸಂಯೋಜನಾಧಿಕಾರಿಗಳು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬಿ.ಎಂ.ಶ್ರೀ ಕಲಾಭವನ, ನರಸಿಂಹರಾಜು ಕಾಲೋನಿ, ಬೆಂಗಳೂರು-೫೬೦ ೦೧೯
೦೩. ಸಂಯೋಜನಾಧಿಕಾರಿಗಳು, ಡಾ.ಹಾಮಾನಾ ಸಂಶೋಧನ ಕೇಂದ್ರ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ-೫೭೪ ೨೪೦ (ದ.ಕ)
೦೪. ಸಂಯೋಜನಾಧಿಕಾರಿಗಳು, ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ, ಬಲ್ಮಠ, ಮಂಗಳೂರು-೫೭೫ ೦೦೧
೦೫. ಸಂಯೋಜನಾಧಿಕಾರಿಗಳು, ಕರ್ನಾಟಕ ಸಂಘ, ಆರ್.ಸಿ.ರಸ್ತೆ, ಗುರುಭವನದ ಹಿಂಭಾಗ, ಮಂಡ್ಯ-೫೭೧ ೪೦೧
೦೬. ಸಂಯೋಜನಾಧಿಕಾರಿಗಳು, ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ-೫೯೧ ೨೨೦, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ.
೦೭. ಸಂಯೋಜನಾಧಿಕಾರಿಗಳು, ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಶ್ರೀಮತಿ ಬಂಗಾರಮ್ಮ ಸಜ್ಜನ ಆವರಣ ಸೊಲ್ಲಾಪುರ ರಸ್ತೆ, ವಿಜಯಪುರ-೫೮೬ ೧೦೧
೦೮. ಸಂಯೋಜನಾಧಿಕಾರಿಗಳು, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ-೫೮೨ ೧೦೧
೦೯. ಸಂಯೋಜನಾಧಿಕಾರಿಗಳು, ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ-೫೮೭ ೧೦೧
೧೦. ಸಂಯೋಜನಾಧಿಕಾರಿಗಳು, ಜೆ.ಎಸ್.ಎಸ್.ನ ಡಾ. ಡಿ. ವೀರೇಂದ್ರ ಹೆಗ್ಗಡೆ ಸಂಶೋಧನ ಕೇಂದ್ರ, ವಿದ್ಯಾಗಿರಿ, ಧಾರವಾಡ-೫೮೦ ೦೦೪
೧೧. ಸಂಯೋಜನಾಧಿಕಾರಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮.
೧೨. ಸಂಯೋಜನಾಧಿಕಾರಿಗಳು, ವೀರಶೈವ ಮಹಾವಿದ್ಯಾಲಯ, ಬಳ್ಳಾರಿ.
೧೩. ಸಂಯೋಜನಾಧಿಕಾರಿಗಳು, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ
೧೪. ಸಂಯೋಜನಾಧಿಕಾರಿಗಳು, ಭರತೇಶ ಶಿಕ್ಷಣ ಸಂಸ್ಥೆ, ಬಿ.ಸಿ. ೧೮೮, ಕೋಟೆ ಹತ್ತಿರ, ಹಳೆ ಪಿ.ಬಿ. ರಸ್ತೆ, ಬೆಳಗಾವಿ-೫೯೦ ೦೧೬

**ಪ್ರತಿಗಳು:**

೧. ಮಾನ್ಯ ಕುಲಪತಿಗಳ ಆಪ್ತಶಾಖೆ, ಕವಿಹಂ.
೨. ನಿರ್ದೇಶಕರು, ಅಧ್ಯಯನಾಂಗ
೩. ಕಚೇರಿ ಪ್ರತಿ.

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ವಿದ್ಯಾರಣ್ಯ – ೫೮೩ ೨೭೬, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.**


# ೨೦೧೬–೧೭ನೇ ಸಾಲಿನ ಪಿಎಚ್.ಡಿ. ಅಧ್ಯಯನಕ್ಕೆ ಆಯ್ಕೆಯಾದ ಮಾನ್ಯತಾ ಕೇಂದ್ರಗಳ ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆಗಳು

೧. ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳೆಲ್ಲಾ ಪಿಎಚ್.ಡಿ. ಅಧ್ಯಯನಕ್ಕೆ ಪ್ರವೇಶ ಪಡೆದವರಲ್ಲ. ಕನ್ನಡ ವಿಶ್ವವಿದ್ಯಾಲಯದ ಯಾವ ಯಾವ ಮಾನ್ಯತಾ ಸಂಸ್ಥೆಗಳಲ್ಲಿ ಯಾವ ಯಾವ ವಿಷಯಗಳಿಗೆ ಮಾರ್ಗದರ್ಶನ ಮಾಡಲು ಪರಿಣಿತ ಮಾರ್ಗದರ್ಶಕರಿದ್ದಾರೋ ಹಾಗೂ ಯಾರಲ್ಲಿ ಅಭ್ಯರ್ಥಿಗಳನ್ನು ತುಂಬಿಕೊಳ್ಳಲು ಸ್ಥಾನಗಳಿವೆಯೋ ಅಂಥ ಕಡೆ ಮಾತ್ರ ಅಭ್ಯರ್ಥಿಗಳಿಗೆ ಅವಕಾಶವಿರುತ್ತದೆ. ಈ ಪ್ರಕ್ರಿಯೆಯು ಯಾವುದೇ ಅಭ್ಯರ್ಥಿಯ ಸ್ವ–ಇಚ್ಛೆಯಾಗಿರುವುದಿಲ್ಲ.

೨. ವಿಷಯಾಧಾರಿತ ಮಾರ್ಗದರ್ಶಕರ ಲಭ್ಯತೆಯನ್ನು ಅವಲಂಬಿಸಿ ಪ್ರವೇಶವು ಸ್ಥಿರಗೊಳ್ಳುತ್ತದೆ.

೩. ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಧ್ಯಯನಕ್ಕೆ ಆಯ್ಕೆಯಾದವರು ದಂಡಶುಲ್ಕದೊಂದಿಗೆ ದಿನಾಂಕ:೧೭.೧೨.೨೦೧೬ರ ಒಳಗಾಗಿ ಸಂಬಂಧಿಸಿದ ಮಾನ್ಯತಾ ಸಂಸ್ಥೆಗಳನ್ನು ಸಂಪರ್ಕಿಸಿ ತಮ್ಮ ಮಾರ್ಗದರ್ಶಕರನ್ನು ಆಯ್ದುಕೊಂಡು ಪ್ರಸ್ತಾವದೊಂದಿಗೆ ತಾತ್ಕಾಲಿಕ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ಅಭ್ಯರ್ಥಿಯು ತನ್ನ ಪಿಎಚ್.ಡಿ. ಅಧ್ಯಯನ ಪ್ರಬಂಧದ ಶೀರ್ಷಿಕೆಯನ್ನು ಮತ್ತು ಮಾರ್ಗದರ್ಶಕರ ಹೆಸರನ್ನು ಅವರ ಸಹಿಯೊಂದಿಗೆ ನೋಂದಣಿ ಅರ್ಜಿಯಲ್ಲಿ ಸೂಚಿಸಬೇಕು. ಪಿಎಚ್.ಡಿ. ಅಧ್ಯಯನ ಪ್ರಬಂಧದ ಪ್ರಕರಣಗಳನ್ನು ವಿಭಜಿಸಿ ವಿವರವಾದ ಸಾರಲೇಖವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಅಂತರ್‌ಶಿಸ್ತೀಯ ಅಧ್ಯಯನ ಸಂದರ್ಭದಲ್ಲಿ ಮಾರ್ಗದರ್ಶಕರ ಒಪ್ಪಿಗೆಯೊಂದಿಗೆ ಸಹಮಾರ್ಗದರ್ಶಕರನ್ನು ಗೊತ್ತುಮಾಡಿಕೊಳ್ಳಬಹುದು. ಅದಕ್ಕೆ ಸಹ ಮಾರ್ಗದರ್ಶಕರ ಒಪ್ಪಿಗೆ ಹಾಗೂ ಸಹಿ ಅಗತ್ಯ. ಮಾನ್ಯತಾ ಸಂಸ್ಥೆಯ ಮೂಲಕ ತಾತ್ಕಾಲಿಕ ನೋಂದಣಿಗೆ ನಿಗದಿತ ನಮೂನೆಯಲ್ಲಿ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸುವುದು.

೪. **ತಾತ್ಕಾಲಿಕ ನೋಂದಣಿ ಸಂದರ್ಭದಲ್ಲಿ ಪಾವತಿಸಬೇಕಾದ ಶುಲ್ಕ:** ತಾತ್ಕಾಲಿಕ ನೋಂದಣಿ ಶುಲ್ಕ, ಅರ್ಧವಾರ್ಷಿಕ ಅಧ್ಯಯನ ಶುಲ್ಕ, ಗ್ರಂಥಾಲಯ ಶುಲ್ಕ ಹಾಗೂ ಕೋರ್ಸ್‌ವರ್ಕ್ ಶುಲ್ಕ

೫. ಯಾವುದೇ ಶುಲ್ಕ ಪಾವತಿ, ಅಧ್ಯಯನ ವರದಿ ಸಲ್ಲಿಕೆಗಳನ್ನು ಅಂಚೆಯ ಮೂಲಕ ಪಾವತಿಸಬಾರದು.

**೬. ಕನ್ನಡ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪಿಎಚ್.ಡಿ. ಶುಲ್ಕಗಳನ್ನು ಮಾತ್ರ ಪಾವತಿಸುವುದು. ಇದನ್ನು ಹೊರತುಪಡಿಸಿ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕಗಳನ್ನು ಪಾವತಿಸಬಾರದು.**

೭. ಪಿಎಚ್.ಡಿ. ಕೋರ್ಸ್‌ವರ್ಕ್‌ಗೆ ಸಂಬಂಧಿಸಿದ ರಜೆ ಮತ್ತಿತರ ಸಮಸ್ಯೆಗಳನ್ನು ಅಭ್ಯರ್ಥಿಗಳೇ ಪರಿಹರಿಸಿಕೊಳ್ಳಬೇಕು.

೮. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಅಧ್ಯಯನಾಂಗ ಇವರನ್ನು ಸಂಪರ್ಕಿಸಬಹುದು.
ದೂರವಾಣಿ : ೦೮೩೯೪–೨೪೧೪೬೪

/-

**ನಿರ್ದೇಶಕರು**

**ಅಧ್ಯಯನಾಂಗ**

**ಅಧ್ಯಯನಾಂಗ**

# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ವಿದ್ಯಾರಣ್ಯ – ೫೮೩ ೨೭೬**

## ೨೦೧೮–೧೯ನೇ ಸಾಲಿನ ಪಿಎಚ್.ಡಿ. ಅಧ್ಯಯನಕ್ಕೆ ತಾತ್ಕಾಲಿಕ ನೋಂದಣಿ ಅರ್ಜಿ.

**(ಮಾನ್ಯತಾ ಸಂಸ್ಥೆಗಳ ವಿದ್ಯಾರ್ಥಿಗಳಿಗೆ)**

**(ಭರ್ತಿ ಮಾಡುವ ಮುನ್ನ ಸೂಚನೆ ಮತ್ತು ಪಿಎಚ್.ಡಿ. ನಿಯಮಾವಳಿಗಳನ್ನು ಗಮನಿಸಿ.)**

**ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ**

| | |
|---|---|
| ಮಾನ್ಯತಾ ಸಂಸ್ಥೆಯ ಹೆಸರು | |
| ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯ | (ಕನ್ನಡ/ಚರಿತ್ರೆ/ಅಭಿವೃದ್ಧಿ ಅಧ್ಯಯನ) |
| ಯಾವ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯಲಾಗಿದೆ. | |

| | | |
|---|---|---|
| ವಿದ್ಯಾರ್ಥಿಯ ಪೂರ್ಣ ಹೆಸರು<br>(ಎಂ.ಎ. ಅಂಕಪಟ್ಟಿಯಲ್ಲಿರುವಂತೆ) | ಕನ್ನಡ | |
| | ಇಂಗ್ಲೀಷ್ | |
| ವಿಳಾಸ | **ದೂರವಾಣಿ ಸಂಖ್ಯೆ :**<br>**ಇಮೇಲ್ ವಿಳಾಸ:**<br>**ಆಧಾರ್ ಸಂಖ್ಯೆ :** | |
| ಜನ್ಮ ದಿನಾಂಕ: (ಪ್ರಮಾಣ ಪತ್ರ ಲಗತ್ತಿಸಿರಿ) | | ಲಿಂಗ : ಗಂಡು/ಹೆಣ್ಣು |
| ಮೀಸಲಾತಿ ವಿವರ<br>(ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಿರಿ) | ಪ.ಜಾ./ಪ.ಪಂ./ಪ್ರವರ್ಗ–೧/೨ಎ/೨ಬಿ/೩ಎ/೩ಬಿ/ಸಾಮಾನ್ಯ | |

| ಶುಲ್ಕ ಪಾವತಿ ವಿವರ | ರಸೀದಿ ಸಂಖ್ಯೆ ಮತ್ತು ದಿನಾಂಕ | ನೋಂದಣಿ ಶುಲ್ಕ | ಅರ್ಧವಾರ್ಷಿಕ ಅಧ್ಯಯನ ಶುಲ್ಕ | ಗ್ರಂಥಾಲಯ ಶುಲ್ಕ | ಅಭಿವೃದ್ಧಿ ನಿಧಿ |
|---|---|---|---|---|---|
| | | ರೂ. | ರೂ. | ರೂ. | ರೂ. |

| | | |
|---|---|---|
| ಉದ್ಯೋಗದಲ್ಲಿರುವವರ ವಿವರ | ನಿರಾಕ್ಷೇಪಣಾ ಪತ್ರ ಲಗತ್ತಿಸಿದೆ/ಲಗತ್ತಿಸಿಲ್ಲ | |
| | ಪದನಾಮ | |
| | ಸಂಸ್ಥೆಯ ಹೆಸರು ಮತ್ತು ವಿಳಾಸ | |

| | |
|---|---|
| ಪಿಎಚ್.ಡಿ. ಪ್ರಬಂಧದ ಶೀರ್ಷಿಕೆ<br>(ಸಾರಲೇಖದ ಮೂರು ಪ್ರತಿಗಳನ್ನು ಸಲ್ಲಿಸಬೇಕು) | |
| ಮಾರ್ಗದರ್ಶಕರ ಹೆಸರು ಮತ್ತು ವಿಳಾಸ | |
| ಅಭ್ಯರ್ಥಿಗಳು ತಿಳಿಸಬಯಸುವ ಇತರೆ ವಿಷಯಗಳು | |

### ದೃಢೀಕರಣ

೧. ನಾನು ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಗಳಿಗೆ ಬದ್ಧನಾಗಿರುತ್ತೇನೆ.

೨. ಪ್ರವೇಶ ಪರೀಕ್ಷೆ, ನೋಂದಣಿ ಸಂದರ್ಭದಲ್ಲಿ ನೀಡಿರುವ ಯಾವುದೇ ಮಾಹಿತಿಯು ಸುಳ್ಳು ಅಥವಾ ತಪ್ಪಾಗಿದ್ದಲ್ಲಿ ಇದರ ಸಂಪೂರ್ಣ ಹೊಣೆಗಾರಿಕೆ ನನ್ನದೇ ಆಗಿರುತ್ತದೆ.

**ದಿನಾಂಕ:** **ಅಭ್ಯರ್ಥಿಯ ಸಹಿ**

**<u>ಮಾರ್ಗದರ್ಶಕರ ದೃಢೀಕರಣ</u>**

ಈಗಾಗಲೇ ಸಂಬಂಧಿಸಿದ ಮಾನ್ಯತಾ ಸಂಸ್ಥೆಯಲ್ಲಿ ಮಾರ್ಗದರ್ಶನ ಮಾಡುತ್ತಿರುವ ಅಭ್ಯರ್ಥಿಗಳ ವಿವರ

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಲಿಂಗ | ಮೀಸಲಾತಿ | ನೋಂದಣಿ ವರ್ಷ | ಪಿಎಚ್.ಡಿ. ವಿಷಯ |
|---|---|---|---|---|---|
| ೧. | | | | | |
| ೨. | | | | | |

ಶ್ರೀ/ಶ್ರೀಮತಿ ______________________ ಇವರಿಗೆ ಪಿಎಚ್.ಡಿ. ಮಾರ್ಗದರ್ಶಕರಾಗಲು ನನ್ನ ಒಪ್ಪಿಗೆ ಇರುತ್ತದೆ.

**ದಿನಾಂಕ:** **ಮಾರ್ಗದರ್ಶಕರ ಸಹಿ ಮತ್ತು ವಿಳಾಸ**

**<u>ಮಾನ್ಯತಾ ಸಂಸ್ಥೆಯ ದೃಢೀಕರಣ</u>**

ಈ ವಿದ್ಯಾರ್ಥಿಯ ಎಲ್ಲ ಮೂಲ ದಾಖಲೆಗಳನ್ನು ಪರಿಶೀಲಿಸಿದ್ದು ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಗಳಿಗೆ ಅನುಸಾರವಾಗಿ ತಾತ್ಕಾಲಿಕ ನೋಂದಣಿ ನೀಡಲಾಗಿದೆ. ವಿದ್ಯಾರ್ಥಿಯ ತಾತ್ಕಾಲಿಕ ನೋಂದಣಿಯನ್ನು ಮಾನ್ಯತಾ ಸಂಸ್ಥೆಯು ಅನುಮೋದಿಸಿದೆ.

**ದಿನಾಂಕ:** **ಮಾನ್ಯತಾ ಕೇಂದ್ರದ ಸಂಯೋಜನಾಧಿಕಾರಿಗಳ ಸಹಿ ಮತ್ತು ಮೊಹರು**

**ಸೂಚನೆಗಳು:**

೧. ಅರ್ಜಿಯನ್ನು ಪೂರ್ಣವಾಗಿ ಭರ್ತಿ ಮಾಡಬೇಕು.

೨. ಅರ್ಜಿಯನ್ನು ಸಂಬಂಧಪಟ್ಟ ಮಾನ್ಯತಾ ಸಂಸ್ಥೆಯ ಮೂಲಕ ಅಧ್ಯಯನಾಂಗಕ್ಕೆ ಸಲ್ಲಿಸಬೇಕು.

೩. ಸಂಶೋಧನಾ ವಿಷಯವನ್ನು ಕುರಿತ ಸಾರಲೇಖವು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.
(ಅ) ಪ್ರಬಂಧದ ಶೀರ್ಷಿಕೆ (ಆ) ಸಂಶೋಧನೆಯ ವ್ಯಾಪ್ತಿ ಮತ್ತು ಉದ್ದೇಶ

೪. ತಾತ್ಕಾಲಿಕ ನೋಂದಣಿ ಅರ್ಜಿಯ ಜೊತೆಗೆ ನೋಂದಣಿ ಶುಲ್ಕ, ಅರ್ಧವಾರ್ಷಿಕ ಅಧ್ಯಯನ ಶುಲ್ಕ, ಗ್ರಂಥಾಲಯ ಶುಲ್ಕ ಮತ್ತು ಕಮ್ಮಟ ಶುಲ್ಕಗಳನ್ನು ಪಾವತಿಸುವುದು.

೫. **ಕನ್ನಡ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪಿಎಚ್.ಡಿ. ಶುಲ್ಕಗಳನ್ನು ಮಾತ್ರ ಪಾವತಿಸುವುದು. ಇದನ್ನು ಹೊರತುಪಡಿಸಿ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕಗಳನ್ನು ಪಾವತಿಸಬಾರದು.**

೬. ಹೆಚ್ಚಿನ ವಿವರ ಮತ್ತು ನಿಯಮಾವಳಿಗಾಗಿ ಪ್ರವೇಶ ಅರ್ಜಿಯ ಜೊತೆಗೆ ನೀಡಿದ ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿ ಪುಸ್ತಿಕೆಯನ್ನು ಗಮನಿಸುವುದು.